# ಪಂಚಕೇದಾರ ಮತ್ತು ಪಂಚಬದರಿ ಯಾತ್ರೆ

**ಸ್ವಾಮಿ ಶಾಂತಿವ್ರತಾನಂದ**

ಸಮುಚ್ಚಯ ಯಾತ್ರೆಯ ಬಗೆಗಳಲ್ಲಿ ಪಂಚಕೇದಾರ ಮತ್ತು ಪಂಚಬದರಿ ಯಾತ್ರೆ ಹೆಚ್ಚಿನವರಿಗೆ ತಿಳಿದಿಲ್ಲದಿದ್ದರೂ, ಈ ಬಗೆಯ ಯಾತ್ರೆಯನ್ನು ಕೈಗೊಳ್ಳುವ ಸಂಪ್ರದಾಯ ನಮ್ಮಲ್ಲಿದೆ. ಹಿಮಾಲಯದ ಆಂತರಿಕ ಭೂವಲಯದಲ್ಲಿರುವ ಈ ಯಾತ್ರೆಯನ್ನು ಮಾಡಲು ದೈಹಿಕ-ಮಾನಸಿಕ ಆರೋಗ್ಯ ಅತಿ ಅಗತ್ಯವಾಗಿದೆ. ಇಂತಹ ಯಾತ್ರೆಯ ಅನುಭವಗಳನ್ನು ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಐರ್ಲೆಂಡಿನ ಡಬ್ಲಿನ್ ಕೇಂದ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಗ್ರಂಥಗಳನ್ನೂ ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಉತ್ತಮ ಲೇಖನಗಳನ್ನು ಬರೆದಿದ್ದಾರೆ.

ಭಾರತದ ಪ್ರತಿ ಅಂಗುಲವೂ ತೀರ್ಥಕ್ಷೇತ್ರ. ಸಾವಿರಾರು ಸಂತರು, ಆಚಾರ್ಯರು, ಮಹಾತ್ಮರು, ಪ್ರವಾದಿಗಳು, ಅವತಾರ ಪುರುಷರು ಅವತರಿಸಿ ನಡೆದಾಡಿದ ಲೀಲಾಕ್ಷೇತ್ರ ಮತ್ತು ತಪೋಕ್ಷೇತ್ರ ಈ ನಮ್ಮ ಭಾರತ. ಶ್ರೀಮದ್ ಭಾಗವತವು ಹೇಳುವಂತೆ, ದೇವತೆಗಳೂ ಭಾರತದಲ್ಲಿ ಜನಿಸಲು ಉತ್ಸುಕರಾಗಿದ್ದಾರೆ. ಹಿಮಾಲಯದ ತಪ್ಪಲಿನಲ್ಲಂತೂ ಅನೇಕ ರೀತಿಯ ನೂರಾರು ತೀರ್ಥಕ್ಷೇತ್ರಗಳಿವೆ.

ಅವುಗಳಲ್ಲಿ ಚಾರ್‌ಧಾಮ್ ಪ್ರಸಿದ್ಧ ತೀರ್ಥಕ್ಷೇತ್ರ. ಚಾರ್‌ಧಾಮ್ ಅಂದರೆ ನಾಲ್ಕು ಧಾಮಗಳು. ಗಂಗೋತ್ರಿ, ಯಮುನೋತ್ರಿ, ಕೇದಾರ ಮತ್ತು ಬದರಿ ಇವೇ ಆ ನಾಲ್ಕು ಕ್ಷೇತ್ರಗಳು. ಅಲ್ಲಿಗೆ ಹೋಗುವುದೇ ಒಂದು ಅದ್ಭುತ ಅನುಭವ. ಇದರ ಜೊತೆಗೆ ಪಂಚಕೇದಾರ, ಪಂಚಪ್ರಯಾಗ, ಪಂಚಕೈಲಾಸ, ಪಂಚ ಗಯಾ, ಸಪ್ತ ಬದರಿ ಹೀಗೆ ಅನೇಕ ತೀರ್ಥಕ್ಷೇತ್ರಗಳ ಪಟ್ಟಿಯನ್ನೇ ನೀಡುತ್ತಾ ಹೋಗಬಹುದು. ಕೇದಾರ ಎಲ್ಲರಿಗೂ ತಿಳಿದಿದ್ದರೂ, ಪಂಚಕೇದಾರದ ಕುರಿತು ಕೆಲವರಿಗೆ ಮಾತ್ರ ತಿಳಿದಿದೆ. ಈ ಐದು ಕ್ಷೇತ್ರಗಳೂ ಶಿವನಿಗೆ ಸಂಬಂಧಿಸಿದ ಕ್ಷೇತ್ರಗಳು. ಚಾರ್‌ಧಾಮ್‌ಗಿಂತಲೂ ಹೆಚ್ಚಿನ ಆನಂದ, ಸಂತೋಷ ಮತ್ತು ಆಧ್ಯಾತ್ಮಿಕ ಅನುಭವಗಳನ್ನು ಈ ಪಂಚಕೇದಾರದಲ್ಲಿ ನಾನು ಅನುಭವಿಸಿದೆ. ಮುಖ್ಯ ಕಾರಣ ಕಡಿಮೆ ಜನ. ಇನ್ನೂ ಹಳ್ಳಿಯ ಮುಗ್ಧ ಮನಸ್ಸುಗಳನ್ನು ಇಲ್ಲಿ ನಾವು ಕಾಣಬಹುದು. ಈ ಕ್ಷೇತ್ರಗಳಿಗೆ ಬಹಳ ನಡೆಯಬೇಕಾದುದರಿಂದ ಶಾರೀರಿಕವಾಗಿ ಸದೃಢರಾಗಿದ್ದರೆ ಮಾತ್ರ ಇಲ್ಲಿಗೆ ಹೋಗಬಲ್ಲೆವು. ಭಗವಂತನ ಅನುಗ್ರಹವಂತೂ ಇರಲೇಬೇಕು. ಇಲ್ಲಿನ ವಾತಾವರಣವನ್ನು ಕಂಡಾಗ ಅದು ನಮಗೆ ವೇದ್ಯವಾಗುತ್ತದೆ.

### ಪಂಚಕೇದಾರ- ಪೌರಾಣಿಕ ಹಿನ್ನೆಲೆ

ಇದನ್ನು ಕುರಿತು ಸ್ವಾಮಿ ಜ್ಞಾನಯೋಗಾನಂದಜಿಯವರು ೨೦೧೬ರ ಏಪ್ರಿಲ್-ಜುಲೈ ತಿಂಗಳಿನ 'ವಿವೇಕಪ್ರಭ' ಸಂಚಿಕೆಗಳಲ್ಲಿ ದೀರ್ಘವಾದ ಪ್ರವಾಸ ಲೇಖನವನ್ನು ಈಗಾಗಲೇ ಬರೆದಿದ್ದಾರೆ.

ಕುರುಕ್ಷೇತ್ರ ಯುದ್ಧವಾಗಿ ಪಾಂಡವರು ರಾಜ್ಯಭಾರವನ್ನು ವಹಿಸಿಕೊಂಡ ಮೇಲೆ, ಪಾಂಡವರು ತಾವು ತಮ್ಮ ಅನೇಕ ಸಂಬಂಧಿಕರನ್ನು, ದಾಯಾದಿಗಳನ್ನು ಯುದ್ಧದಲ್ಲಿ ಕೊಂದಿದ್ದರಿಂದ ಶಿವನ ದರ್ಶನವನ್ನು ಪಡೆದು ಪಾಪ ಪರಿಹಾರವನ್ನು ಮಾಡಿಕೊಳ್ಳಬೇಕೆಂದು ಆಲೋಚಿಸಿದರು ಮತ್ತು ಅದರಿಂದ ಮುಂದೆ ತಾವು ಸ್ವರ್ಗಕ್ಕೆ ಹೋಗಲು ಕೂಡ ಸಾಧ್ಯವಾಗುತ್ತದೆ ಎಂದು ಭಾವಿಸಿದರು. ಅದರಂತೆ ದ್ರೌಪದಿ ಹಾಗೂ ಪಾಂಡವರು ಕಾಶಿಯ ವಿಶ್ವನಾಥನ ದರ್ಶನಕ್ಕೆ ಹೋದರು. ಪರಶಿವನು ಇವರ ಭಕ್ತಿಯನ್ನು ಪರೀಕ್ಷೆ ಮಾಡಲು (ಪಾಂಡವರ ಪಾಪಕ್ಕೆ ಹೆದರಿ ಎಂಬ ಇನ್ನೊಂದು ಅಭಿಪ್ರಾಯವೂ ಇದೆ) ಶಿವನು ಕಾಶಿಯಲ್ಲಿ ಇವರಿಗೆ ದರುಶನ ನೀಡಲಿಲ್ಲ. ಪಾಂಡವರು ಶಿವನನ್ನು ಕಾಶಿಯಲ್ಲಿ ಕಾಣಲಾಗದಿದ್ದರಿಂದ ಚಿಂತಾಕ್ರಾಂತರಾದರು. ಪರಶಿವನನ್ನು ಹುಡುಕಿಕೊಂಡು ಹಿಮಾಲಯದತ್ತ ಹೊರಟರು. ಶಿವನು ನಂದಿಯ (ಹಸುವಿನ) ರೂಪವನ್ನು ತಾಳಿದನು. ಹಿಮಾಲಯದ ಪ್ರದೇಶದಲ್ಲಿ ಗುಪ್ತರೂಪದಲ್ಲಿ ಶಿವನು ಹುಲ್ಲಿನ ಮೈದಾನದಲ್ಲಿ ಇದ್ದ. ಆದುದರಿಂದ, ಈ ಸ್ಥಳಕ್ಕೆ 'ಗುಪ್ತಕಾಶಿ' ಎಂಬ ಹೆಸರು ಬಂದಿತು.

ಶಿವನು ಹಸುವಿನ ರೂಪದಲ್ಲಿರುವುದನ್ನು ಭೀಮನು ಗುರುತಿಸಿ, ಹಿಡಿಯಲು ಹೋದನು. ಆದರೆ ಹಸುವು ಭೂಮಿಯ ಒಳಗೆ ಹೋಗಲು ಪ್ರಯತ್ನಿಸಿತು. ಭೀಮನು ಹಸುವಿನ ಬಾಲವನ್ನು ಹಿಡಿದು ಎಳೆದಾಗ ಶಿವನು ಐದು ಸ್ಥಳಗಳಲ್ಲಿ ಆವಿರ್ಭಾವಗೊಂಡನು ಎಂದು ಪುರಾಣವು ತಿಳಿಸುತ್ತದೆ. ಆ ಐದು ಕ್ಷೇತ್ರಗಳೇ ಪಂಚ ಕೇದಾರ.

ಹಸುವಿನ ಡುಬ್ಬದ ಪ್ರದೇಶ ಕೇದಾರದಲ್ಲಿ , ಮಧ್ಯಭಾಗ-ಹೊಟ್ಟೆಯ ಭಾಗ ಮಧ್ಯಮಹೇಶ್ವರದಲ್ಲಿ, ಭುಜಗಳು ತುಂಗನಾಥದಲ್ಲಿ, ಮುಖ ರುದ್ರನಾಥದಲ್ಲಿ, ಅವನ ಜಟಾಜೂಟ ಕಲ್ಪೇಶ್ವರದಲ್ಲಿ ಆವಿರ್ಭಾವವಾದವು ಎಂದು ನಂಬಿಕೆ. ಈ ಐದು ಕೇದಾರಗಳೂ, ಮುಖ್ಯ ಕೇದಾರ ಮತ್ತು ಬದರೀ ಕ್ಷೇತ್ರಗಳ ನಡುವೆಯೇ ಇವೆ.

### ಪಂಚ ಬದರಿ (ಸಪ್ತ ಬದರಿ)

ಬದರಿ ವಿಶಾಲ, ಆದಿ ಬದರಿ, ವೃಧ ಬದರಿ, ಭವಿಷ್ಯ ಬದರಿ, ಯೋಗಧ್ಯಾನ ಬದರಿ, ಧ್ಯಾನ ಬದರಿ, ಅರ್ಧ ಬದರಿ ಇವೇ ಏಳು ಬದರಿ ಕ್ಷೇತ್ರಗಳು. ಹಿಮಾಲಯದ ತಪ್ಪಲಿನ ಉತ್ತರಾಖಂಡ ರಾಜ್ಯದಲ್ಲಿ ಈ ಏಳು ಬದರಿಗಳೂ ಇವೆ. ಬದರಿ ವಿಶಾಲದಿಂದ ಸುಮಾರು ೨೪ ಕಿಲೋಮೀಟರ್ ದೂರದಲ್ಲಿ ಉತ್ತರದಿಂದ ಸತೋಪಂಥ್ ಎಂಬ ಪ್ರದೇಶದಿಂದ ಅಲಕನಂದಾ ನದಿಯ ದಂಡೆಯಲ್ಲಿ, ದಕ್ಷಿಣಕ್ಕೆ ನಂದಪ್ರಯಾಗದವರೆಗೆ, ಈ ಏಳು ಕ್ಷೇತ್ರಗಳು ಇವೆ. ಒಂದೆರಡು

ಕ್ಷೇತ್ರಗಳು ಬಿಟ್ಟರೆ, ಹೆಚ್ಚಿನ ಜನಕ್ಕೆ ಇದು ತಿಳಿಯದಿರುವುದರಿಂದ ಹೋಗುವುದಿಲ್ಲ.

### ಕೇದಾರ

ಕೇದಾರೇಶ್ವರನ ಕಥೆ ಕೇಳಿದ ಮಾತ್ರದಿಂದ ಸಕಲ ಪಾಪಗಳು ನಾಶವಾಗುತ್ತವೆಯಂತೆ. ಹೃದಯದಲ್ಲಿ ಕೇದಾರೇಶ್ವರನನ್ನು ಧರಿಸಿ ಒಂದು ಬಾರಿ ಭಕ್ತಿಯಿಂದ ನಮಸ್ಕರಿಸಿದರೂ ಸಾಕು ಅವನು ಮುಕ್ತಿಯನ್ನು ಹೊಂದುತ್ತಾನೆ ಎಂದು ಶಿವನು ಪಾರ್ವತಿಗೆ ಕೇದಾರ ಕ್ಷೇತ್ರದ ಮಹಿಮೆಯ ಕುರಿತು ತಿಳಿಸುತ್ತಾನೆ. ನಾವು ಮೂರು ಜನ ಸಾಧುಗಳು ಹರಿದ್ವಾರದಿಂದ ಗುಪ್ತಕಾಶಿಗೆ ತೆರಳಿದೆವು. ಗುಪ್ತಕಾಶಿಯಲ್ಲಿ ಇನ್ನಿಬ್ಬರು ಸಾಧುಗಳು ನಮ್ಮನ್ನು ಸೇರಿಕೊಂಡರು. ಅಲ್ಲಿ ತುಳಸೀದಾಸ ಗುಭೆ ಎಂಬ ವೈದ್ಯರು ಹಾಗೂ ಶ್ರೀರಾಮಕೃಷ್ಣ ಭಕ್ತರು ಉಚಿತ ವೈದ್ಯಕೀಯ ಸೇವೆಯನ್ನು ಜನರಿಗೆ ನೀಡುತ್ತಿದ್ದಾರೆ. ಅಲ್ಲದೆ ಸಾಧುಗಳಿಗೆ ಹಾಗೂ ಭಕ್ತರಿಗೆ ವಸತಿ ಸೇವೆಯನ್ನು ನೀಡುತ್ತಿದ್ದಾರೆ. ಅಲ್ಲಿ ನಾವು ತಂಗಿ ಶಿವನ ದರ್ಶನವನ್ನು ಪಡೆದೆವು. ಇನ್ನು ಕೆಲವು ದೇವಸ್ಥಾನಗಳಿಗೆ ಹೋದೆವು. ಕಾಳಿದಾಸನು ಕಾಳೀದೇವಿಯ ಅನುಗ್ರಹ ಪಡೆದ ಸ್ಥಳಕ್ಕೆ ಭೇಟಿ ನೀಡಿ ಆನಂದವನ್ನು ಅನುಭವಿಸಿದೆವು.

ಪುರಾಣಗಳಲ್ಲಿ ಗುಪ್ತಕಾಶಿಯ ಸಮೀಪ ಪರಶಿವನು ಪಾರ್ವತಿಗೆ ವಿವಾಹವಾಗಲು ಪ್ರಸ್ತಾಪ ಮಾಡಿದನು ಎಂದು ಹೇಳಿದೆ. ಅಲ್ಲದೆ ವಾರಾಣಸಿ ಹಾಗೂ ಇನ್ನೂ ಆರು ಕಾಶಿಗಳನ್ನು ಭಾರತದಾದ್ಯಂತ ಉಲ್ಲೇಖಿಸಲಾಗಿದೆ. ವಾರಾಣಸಿಗೆ ಹೋಗಲು ಸಾಧ್ಯವಾಗದಿದ್ದವರಿಗೆ ಈ ಆರು ಕಾಶಿಗಳಲ್ಲಿ ಯಾವುದಾದರೂ ಒಂದು ಕಾಶಿಗೆ ಹೋದರೂ ಅಷ್ಟೇ ಪುಣ್ಯ ದೊರಕುತ್ತದೆ ಎಂದು ಪ್ರತೀತಿ. ಉತ್ತರದಲ್ಲಿ ಉತ್ತರಕಾಶಿ, ಗುಪ್ತಕಾಶಿ; ದಕ್ಷಿಣದಲ್ಲಿ ನಂಜನಗೂಡು, ಪೂರ್ವದಲ್ಲಿ ಭುವನೇಶ್ವರದ ಶಿವನ ದೇವಸ್ಥಾನ; ಪಶ್ಚಿಮದಲ್ಲಿ ನಾಸಿಕದ ಬಳಿ ಇರುವ ಕಾಶಿ; ಹಿಮಾಚಲ ಪ್ರದೇಶದ ಮಂಡಿಯಲ್ಲಿರುವ ಶಿವನ ದೇವಾಲಯಗಳನ್ನು ಆರು ಕಾಶಿಗಳು ಎಂದು ಉಲ್ಲೇಖಿಸಲಾಗಿದೆ.

ಗುಪ್ತಕಾಶಿಯಲ್ಲಿ ಸ್ಥಳೀಯರ ನೆರವಿನಿಂದ ಟಿಕೇಟನ್ನು ಖರೀದಿಸಿದ್ದೆವು. ಮುಂಜಾನೆ ಸುಮಾರು ೫ ಘಂಟೆಗೆ ಗುಪ್ತಕಾಶಿಯಿಂದ ಗೌರೀಕುಂಡಕ್ಕೆ ಗಾಡಿಯಲ್ಲಿ ಪಯಣಿಸಿದೆವು. ದಾರಿಯಲ್ಲಿ ಮಳೆ ಹಾಗೂ ವಾಹನಗಳ ದಟ್ಟನೆ. ಅದರಿಂದ ಗೌರೀಕುಂಡಕ್ಕೆ ತಲುಪಲು ತಡವಾಯಿತು. ಅದು ಅಲ್ಲಿ ಸರ್ವೇಸಾಮಾನ್ಯದ ಸಂಗತಿ. ಗುಡ್ಡಗಾಡು ಪ್ರದೇಶ, ಚಿಕ್ಕರಸ್ತೆಗಳು, ಮಳೆ ಮತ್ತು ವಾತಾವರಣದ ವೈಪರೀತ್ಯದಿಂದ ಪ್ರಯಾಣವು ತಡವಾಗುತ್ತಿರುತ್ತದೆ.

ಬೆಳಿಗ್ಗೆ ಟೀ ಕುಡಿದು ಹತ್ತು ರೂಪಾಯಿ ಬೆತ್ತವನ್ನು ಖರೀದಿಸಿ ಜೈ ಕೇದಾರ್‌ನಾಥ್ ಎಂದು ಹತ್ತಲು ಪ್ರಾರಂಭಿಸಿದೆವು. ೨೦೧೨ ರಲ್ಲಿ ಚಾರ್‌ಧಾಮ್ ಯಾತ್ರೆ ಮಾಡುವಾಗಲೂ, ಕೇದಾರಕ್ಕೆ ಈಗಾಗಲೇ ಭೇಟಿ ನೀಡಿದ್ದೆ. ಆದರೆ ೨೦೧೬ರಲ್ಲಿ ಬೇರೆಯೇ ಅನುಭವ. ಕಾರಣ ೨೦೧೩ರ ಪ್ರಕೃತಿ ವಿಕೋಪದಿಂದ, ಈ ಬಾರಿ ರಸ್ತೆ ಬದಲಾಗಿದೆ. ಹೆಚ್ಚು ಏರಿನ ಪ್ರದೇಶಗಳ ಅನುಭವ. ಎತ್ತರದ ಪ್ರದೇಶವಾಗಿರುವ ಕಾರಣ, ಆಮ್ಲಜನಕದ ಕೊರತೆ. ಆದ್ದರಿಂದ ಸ್ವಲ್ಪ ನಿತ್ರಾಣ ಆಗುವುದರಲ್ಲಿ ಆಶ್ಚರ್ಯವಿಲ್ಲ. ಆದರೂ ಪಂಚಕೇದಾರಕ್ಕೆ ಹೋಗಬೇಕಾದರೆ ಹೆಚ್ಚು ನಡೆಯಬೇಕಾಗುತ್ತದೆ ಎಂದು ಮೊದಲೇ ತಿಳಿದಿದ್ದರಿಂದ, ಸುಮಾರು ಒಂದು ತಿಂಗಳ ಕಾಲ ಹೆಚ್ಚು ನಡೆಯುವ ಅಭ್ಯಾಸವನ್ನು ಮಾಡಿದ್ದೆ. ಆದ್ದರಿಂದ ಇತರರಿಗೆ ಹೋಲಿಸಿದರೆ ನನಗೆ ದಣಿವು ಕಡಿಮೆ ಆಗುತ್ತಿತ್ತು ಹಾಗೂ ಬೇಗನೆ ಮುಂದೆ ಸಾಗುತ್ತಿದ್ದೆ.

ಕೊರೆಯುವ ಚಳಿ. ಕೇದಾರನ ಸನ್ನಿಧಿಗೆ ಸುಮಾರು ಮಧ್ಯಾಹ್ನ ಒಂದು ಗಂಟೆಗೆ ತಲುಪಿದೆವು. ಅಲ್ಲಿ ಪಂಡ (ಪೂಜಾರಿ) ತನ್ನ ನಿವಾಸದಲ್ಲಿ ಉಳಿಯಲು ವ್ಯವಸ್ಥೆ ಮಾಡಿದ. ರಾತ್ರಿ ಆರತಿಯ ಸಮಯದಲ್ಲಿ ಕರೆದುಕೊಂಡು ಹೋಗುವೆ ಎಂದಿದ್ದ. ಕೈ ಕಾಲು ತೊಳೆದು ಊಟ ಮಾಡಿ ಮಲಗಿದ್ದೇ ತಡ, ನಿದ್ರಾದೇವಿ ಆವರಿಸಿಬಿಟ್ಟಳು. ಕಣ್ಣು ತೆರೆದಾಗ ಸಂಜೆಯಾಗಿತ್ತು. ಕೈಕಾಲು ತೊಳೆದು, ಸಂಜೆಯ ಉಪಾಸನೆಯನ್ನು ಮುಗಿಸಿ, ಪಂಡನ ಜೊತೆ ಟೀ ಸೇವಿಸಿ, ದರುಶನಕ್ಕೆ ಹೋದೆವು. ರಾತ್ರಿಯ ಆರತಿಯ ಸಮಯದಲ್ಲಿ ಕೇದಾರನ ದರ್ಶನ ಅದ್ವಿತೀಯ. ಅವನ ಕೃಪೆಯಿಂದ ಅಂದು ಆ ಪುಣ್ಯ ನಮಗೆ ಲಭಿಸಿತ್ತು. ಆರತಿಯ ವೀಕ್ಷಣೆಯಿಂದ ಮನಸ್ಸು ಆನಂದದಿಂದ ತುಂಬಿ ಹೋಗಿತ್ತು. ಭಗವಂತನ ಸಮೀಪದಲ್ಲೇ ಕುಳಿತು ಪೂಜೆ ಮಾಡಿ, ಅವನ ಸ್ಪರ್ಶದಿಂದ ಇನ್ನಷ್ಟು ಅಲೌಕಿಕ ಆನಂದವನ್ನು ಅನುಭವಿಸಿದೆವು.

ಪುನಃ ಮುಂಜಾನೆ ನಸುಕಿನ ವೇಳೆಯಲ್ಲಿ ಕೇದಾರೇಶ್ವರನ ದರುಶನ ಮಾಡಿ, ತಿಂಡಿ ಸೇವಿಸಿ, ಭೈರವನ ದರ್ಶನವನ್ನು ಮಾಡಲು ಬೆಟ್ಟವೊಂದನ್ನು ಹತ್ತಿದೆವು. ಅಲ್ಲಿದ್ದ ರಮಣೀಯ ಪ್ರಕೃತಿ ಸೌಂದರ್ಯ, ಆಧ್ಯಾತ್ಮಿಕ ತರಂಗಗಳು ಆಹಾ! ಎಂತಹ ಅನುಭವ– ಆನಂದ! ಅಲ್ಲಿಂದ ಕೆಳಗೆ ಬರಲು ಮನಸ್ಸೇ ಆಗುತ್ತಿಲ್ಲ.

ಬಲವಂತದಿಂದ ಕೆಳಗೆ ಇಳಿದು ಬಂದೆವು. ದಾರಿ ಮಧ್ಯೆ ಬಾಬಾಜಿ ಒಬ್ಬರು ನಮ್ಮನ್ನು ಕರೆದರು. ಇಲ್ಲಿ ಒಂದು ಚಮತ್ಕಾರ ರೂಪದ ಕೊಳವಿದೆ ಬನ್ನಿ ಎಂದು. ಅಲ್ಲಿ ಹೋದಾಗ ಪ್ರಣವದ ಉಚ್ಚಾರ ಮಾಡಿದರೆ, ಕೊಳದ ಒಳಗಡೆಯಿಂದ ನೀರಿನ ಗುಳ್ಳೆಗಳು ಬರುತ್ತವೆ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ ತೋರಿಸಿದರು. ಅದನ್ನು ಕಂಡು ಅವರಿಗೆ ಧನ್ಯವಾದ ತಿಳಿಸಿ, ತಂಗಿದ್ದ ಸ್ಥಳಕ್ಕೆ ಬಂದೆವು. ಕೆಳಗಿಳಿದು ವಾಹನದಲ್ಲಿ ಮರಳಿ ಡಾ. ತುಳಸೀದಾಸರ ವಾಸಸ್ಥಳದಲ್ಲಿ ವಿಶ್ರಾಂತಿಯನ್ನು ಪಡೆದು ಮಧ್ಯಮಹೇಶ್ವರಕ್ಕೆ ಪ್ರಯಾಣ ಪ್ರಾರಂಭಿಸಿದೆವು.

### ಉಖೀಮಠ

ಉಖೀಮಠದಲ್ಲಿ ಭಾರತ್ ಸೇವಾಶ್ರಮದವರು ಅತಿಥಿಗೃಹಗಳನ್ನು ಹೊಂದಿದ್ದಾರೆ. ಅಲ್ಲಿ ಅಂದು ವಿಶ್ರಾಂತಿಯನ್ನು ಪಡೆಯಲು ವ್ಯವಸ್ಥೆಯಾಯಿತು. ಅವರ ಸಂಧ್ಯಾರತಿಯ ವಿಶೇಷ ನಮ್ಮ ರಾಮಕೃಷ್ಣ ಆಶ್ರಮಗಳಲ್ಲಿ ನಡೆಯುವಂತೆ, ಅಲ್ಲಿಯೂ

ಐದು ರೀತಿಯ ವಸ್ತುಗಳಿಂದ ಆರತಿಯನ್ನು ಮಾಡುತ್ತಾರೆ. ಆದರೆ ಕತ್ತಿಯನ್ನು ಉಪಯೋಗಿಸಿ ಆರತಿಯ ಸೇವೆ ಮಾಡುವುದು ಇಲ್ಲಿನ ವಿಶೇಷ. ಅದು ನಮ್ಮೆಲ್ಲರಿಗೂ ವಿಸ್ಮಯಕಾರಿಯಾಗಿತ್ತು.

ಉಖೀಮಠದಲ್ಲಿ ವೀರಶೈವರ ಮಠವೂ ಇದೆ. ಅಲ್ಲಿಯ ಕ್ಷೇತ್ರಕ್ಕೆ ಭೇಟಿ ಕೊಟ್ಟು, ಅಲ್ಲಿಯ ಆರತಿಯನ್ನು ವೀಕ್ಷಿಸಿ, ಆನಂದಿತರಾದೆವು. ಅಲ್ಲಿಯ ಮಠಾಧೀಶರ ದರ್ಶನವಾಯಿತು. ಅವರೂ ಕನ್ನಡದವರೇ. ಕರ್ನಾಟಕದಿಂದ ನಾವು ಬಂದಿದ್ದೇವೆ ಎಂದು ತಿಳಿದು ಅವರು ಬಹಳ ಆನಂದಿತರಾದರು. ಪ್ರಸಾದವನ್ನು ಸ್ವೀಕರಿ ಸಲು ತಿಳಿಸಿದರು. ನಮ್ಮ ವಾಸ್ತವ್ಯವನ್ನು ವಿಚಾರಿಸಿ, ಮುಂದೆ ಬಂದಾಗ ತಮ್ಮಲ್ಲೇ ತಂಗಬೇಕೆಂದು ಪ್ರೀತಿಯಿಂದ ತಿಳಿಸಿದರು. ಪಂಚಕೇದಾರಗಳ ವ್ಯವಸ್ಥೆ, ಪೂಜೆ, ಆಡಳಿತ ತಮ್ಮ ಸುಪರ್ದಿಗೆ ಬರುತ್ತವೆ. ದೀಪಾವಳಿ ಮುಗಿದ ಮೇಲೆ ಕೇದಾರೇಶ್ವರ ಹಾಗೂ ಮಧ್ಯಮಹೇಶ್ವರನ ಉತ್ಸವಮೂರ್ತಿಗಳನ್ನು ತಮ್ಮ ಮಠದಲ್ಲೇ ಇರಿಸಿ, ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗುವುದು. ಹಿಂದೆ ಐದು ಕೇದಾರ ದೇವಸ್ಥಾನಗಳ ಮೇಲ್ವಿಚಾರಣೆಯನ್ನೂ ನಾವು ಮಾಡುತ್ತಿದ್ದೆವು. ಅಲ್ಲದೆ ಆ ಐದು ದೇವಸ್ಥಾನಗಳಿಗೂ ಕನ್ನಡದವ ರನ್ನೇ ಪೂಜಾರಿಯಾಗಿ ನೇಮಕ ಮಾಡುತ್ತಿದ್ದೆವು. ಆದರೆ ಬಹಳ ಬಾರಿ ಪೂಜಾರಿಗಳು ಆ ತಣ್ಣನೆಯ ಕಾಡು ಪ್ರದೇಶಗಳಲ್ಲಿ ಒಬ್ಬರೇ ನೆಲೆಸಲು ಒಪ್ಪದೇ ಇದ್ದುದರಿಂದ, ಮುಖ್ಯ ಕೇದಾರ ಹಾಗೂ ಮಧ್ಯ ಮಹೇಶ್ವರನ ದೇವಸ್ಥಾನಗಳಿಗೆ ಮಾತ್ರ ಕನ್ನಡ ಪೂಜಾರಿಗಳನ್ನು ಸೀಮಿತ ಮಾಡಿ, ಇನ್ನುಳಿದ ೩ ದೇವಸ್ಥಾನಗಳಿಗೆ ಸ್ಥಳೀಯರನ್ನು ನೇಮಕ ಮಾಡುವುದು ರೂಢಿಗೆ ಬಂದಿತು ಎಂದು ತಿಳಿಸಿದರು. ಇಲ್ಲಿ ಮಾಂಧಾತ ಎಂಬ ಮನುವಿನ ಆಸ್ಥಾನವಿತ್ತು. ಕೃಷ್ಣ ಮತ್ತು ಬಾಣಾಸುರನ ನಡುವೆ ಘೋರ ಯುದ್ಧ ಇಲ್ಲಿ ನಡೆಯಿತು. ಕೃಷ್ಣನ ಮಗನಾದ ಅನಿರುದ್ಧನ ಮದುವೆಯೂ ಇಲ್ಲಿ ಜರುಗಿತು ಎಂದು ಪುರಾಣಗಳು ತಿಳಿಸುತ್ತವೆ.

### ಮಧ್ಯಮಹೇಶ್ವರ

ನಂದಿಯ ದೇಹದ ಮಧ್ಯಭಾಗ ಇಲ್ಲಿ ಪ್ರಕಟವಾದ ಕಾರಣ ಇದನ್ನು ಮಧ್ಯಮಹೇಶ್ವರ ಎಂದು ಕರೆಯುತ್ತಾರೆ. ಆಡು ಭಾಷೆಯಲ್ಲಿ ಇದು ಮದ್ದಮಹೇಶ್ವರ, ಮಧುಮಹೇಶ್ವರ ಎಂಬ ಹೆಸರಿನಿಂದ ಚಾಲ್ತಿಯಲ್ಲಿದೆ.

ಉಖೀಮಠದಿಂದ ನಾವು ಗಾಡಿಯಲ್ಲಿ ಉನಿಯಾನ ಎಂಬ ಸ್ಥಳಕ್ಕೆ ಹೋದೆವು. ಅಲ್ಲಿಂದ ಗೌಂಡರ್‌ಗೆ ನಡೆದು ತಂಗಿದೆವು. ಇಲ್ಲಿಂದ ಮತ್ತೆ ಹಳ್ಳಿ, ಗುಡ್ಡಗಳ ನಡುವೆ ಇಳಿಯುತ್ತಾ, ಹತ್ತುತ್ತಾ, ಪ್ರಕೃತಿಯ ಸೊಬಗನ್ನು ಅನುಭವಿಸುತ್ತಾ ಮುಂದೆ ಸಾಗಿದೆವು. ಹೆಚ್ಚಿನ ಸಮಯ ನೂಡಲ್ಸ್ ನಮ್ಮ ಆಹಾರ. ದಾರಿಯ ಮಧ್ಯದಲ್ಲಿ ಸಣ್ಣ ಸಣ್ಣ ಹಳ್ಳಿಗಳು. ಇಲ್ಲಿಯ ಜನರು ಬಹಳ ಮುಗ್ಧಮನಸ್ಸಿನವರು. ಬಹುತೇಕರು ಸಮೀಪದ ನಗರಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ. ಇನ್ನು ಕೆಲವರು ಮನೆಯಲ್ಲಿ ಉಳಿದು, ತೋಟ ಅಥವಾ



ಗದ್ದೆಯ ಕೆಲಸವನ್ನು ಮಾಡುತ್ತಿರುತ್ತಾರೆ. ಅವರ ಜೀವನ ಬಹಳ ಶ್ರಮದಾಯಕ. ಅವರ ಮನೆಯೇ ಅಂಗಡಿ ಕೂಡ. ಏನಾದರೂ ಕೊಂಡುಕೊಳ್ಳುವುದಕ್ಕೆ ಪೀಡಿಸುತ್ತಾರೆ. ಅದು ಅವರ ಜೀವನ, ಹೊಟ್ಟೆಪಾಡು. ಆದ್ದರಿಂದ ಬಹಳ ಬಾರಿ ಏನನ್ನಾದರೂ ನಾವು ಅವರುಗಳ ಬಳಿ ಕೊಂಡುಕೊಳ್ಳುತ್ತಿದ್ದೆವು. ಅವರ ಕಷ್ಟ-ಸುಖ, ಜೀವನ ಶೈಲಿಯನ್ನು ವಿಚಾರಿಸಿ ತಿಳಿದುಕೊಳ್ಳುತ್ತಿದ್ದೆವು. ನಮಗೆ ಅದೊಂದು ಹೊಸ ಅನುಭವ.

ದಾರಿಯ ಮಧ್ಯದಲ್ಲಿ ಮಹಿಳೆಯೊಬ್ಬಳು ಓಡಿ ಬಂದಳು. ಸುಮಾರು ೧೦ ಘಂಟೆ, ಬಾಬಾಜಿ ದಯವಿಟ್ಟು ಹಾಲನ್ನು ಕೊಂಡುಕೊಳ್ಳಿ, ನಮಗೆ ಅದರಿಂದ ಸಹಾಯವಾಗುತ್ತದೆ ಎಂದಳು. ಆಗಷ್ಟೇ ತಿಂಡಿ, ಚಹಾವನ್ನು ನಾವು ಸೇವಿಸಿದ್ದ ಕಾರಣ, ನಯವಾಗಿ ತಿರಸ್ಕರಿಸಿದೆವು. ಆದರೆ ಆ ಮಹಿಳೆ ಮತ್ತೆ ಮತ್ತೆ ಪ್ರಾರ್ಥಿಸಿಕೊಂಡಳು. ಬೇರೆ ದಾರಿ ಕಾಣದೆ ಒಂದು ಲೋಟ ಹಾಲನ್ನು ನಾನು ಕೊಂಡುಕೊಂಡೆ. ಎಂತಹ ರುಚಿ! ಶುದ್ಧವಾದ ಹಾಗೂ ಕಲಬೆರಕೆಯಿಲ್ಲದ ಹಾಲು ಎಂತಹ ರುಚಿಕರ! ಅದು ಹೇಗಿರುತ್ತದೆ ಎಂದು ನನಗೆ ಅಂದು ಅನುಭವಕ್ಕೆ ಬಂದಿತು. ಹತ್ತು ರೂಪಾಯಿಯಿಂದ ಅವಳಲ್ಲಿ ಕಂಡ ಧನ್ಯತಾಭಾವ ನನ್ನನ್ನು ವಿಸ್ಮಯಗೊಳಿಸಿತ್ತು.

ಸುಮಾರು ೨-೩ ಕಿಲೋಮೀಟರ್ ಮಧ್ಯಮಹೇಶ್ವರಕ್ಕೆ ಬಾಕಿ ಇದೆ. ಮಳೆ ಪ್ರಾರಂಭವಾಯಿತು. ಆಲಿಕಲ್ಲಿನ ಮಳೆ ಬೇರೆ. ಆ ತಣ್ಣನೆಯ ನೀರು ಶರೀರವನ್ನು ಸೋಕಿದ ಕೂಡಲೇ, ಆಹಾ! ಎಂತಹ ಅನುಭವ. ಚಳಿಗೆ ರಕ್ತ ಹೆಪ್ಪುಗಟ್ಟಿ, ರಕ್ತಸಂಚಾರವೇ ನಿಲ್ಲುತ್ತಿರುವಂತಹ ಅನುಭವ. ಸಾಧ್ಯವಾದಷ್ಟು ಬೇಗ ಬೇಗನೆ ನಡೆದು ಕೋಣೆಯಲ್ಲಿ ತಂಗಲು ದರ ಗೊತ್ತು ಮಾಡಿದೆವು. ಪ್ರಯಾಣಿಕರಿಗಾಗಿ ಚಪಾತಿಗಳನ್ನು ಮಾಡಿ ಕಟ್ಟಿಗೆ ಒಲೆಯಲ್ಲಿ ಬೇಯಿಸುತ್ತಿದ್ದರು. ಬ್ಯಾಗ್‌ಗಳನ್ನು ಮಂಚದ ಮೇಲೆ ಹಾಕಿ, ತಕ್ಷಣವೇ ಅದರ ಮುಂದೆ ಕುಳಿತು ಸ್ವಲ್ಪ ಶಾಖವನ್ನು ಸವಿದ ಮೇಲೆ, ಶರೀರಕ್ಕೆ ತ್ರಾಣ ಬಂದಂತಾಯಿತು. ಆದರೆ ಸ್ಥಳೀಯರಿಗೆ ಈ ಚಳಿ, ಮಳೆ ಯಾವುದೂ ಲೆಕ್ಕಕ್ಕೇ ಇಲ್ಲ.

ಅಂದು ಸಂಜೆ ಶಿವನ ದರುಶನ ಮಾಡಿದೆವು. ಭಜನೆ, ರುದ್ರ ಪಠಣಗಳನ್ನು ಮಾಡಿದೆವು. ಅಲ್ಲಿನ ಕನ್ನಡ ಪೂಜಾರಿಗೆ ನಮ್ಮನ್ನು ಕಂಡು ಸಂತೋಷವಾಯಿತು. ಮಾರನೆಯ ದಿವಸ ಪೂಜೆಯ



ಬಳಿಕ, ಅಲ್ಲಿ ಮತ್ತೊಂದು ಬೆಟ್ಟವನ್ನು ಹತ್ತಿದೆವು. ಬುಡಾ ಮಹೇಶ್ವರನ ದರ್ಶನವನ್ನು ಪಡೆದೆವು. ಸ್ಥಳೀಯರ ಪ್ರಕಾರ ಮೂಲತಃ ಶಿವನ ದೇವಸ್ಥಾನ ಅಲ್ಲಿ ಇತ್ತು. ಜನರಿಗೆ ಅಲ್ಲಿಗೆ ಹೋಗಲು ಕಷ್ಟವಾಗುತ್ತದೆ ಎಂದು, ಈಗಿನ ಸ್ಥಳಕ್ಕೆ ಸ್ಥಳಾಂತರಿಸಲಾಯಿತು ಎಂದು ಹೇಳುತ್ತಾರೆ.

ಅರ್ಚಕರು ನಮಗೆ ನೈವೇದ್ಯ, ಹಾಗೂ ಕೆಲವು ತಿನಿಸುಗಳನ್ನು ನೀಡಿದರು. ಪ್ರಸಾದವನ್ನು ಸ್ವೀಕರಿಸಿ, ಅವರಿಗೆ ಧನ್ಯವಾದಗಳನ್ನು ತಿಳಿಸಿ, ಅಲ್ಲಿಂದ ಹೊರಟೆವು. ಅಲ್ಲಿಯೂ ಕ್ರಿಕೆಟ್ ಪ್ರವೇಶಿಸಿ ಬಿಟ್ಟಿದೆ. ಸ್ಥಳೀಯ ಮಕ್ಕಳು ಕ್ರಿಕೆಟ್ ಆಡುತ್ತಿದ್ದುದನ್ನು ಕಂಡು ಕೆಲ ಕಾಲ ವೀಕ್ಷಿಸಿ, ಆನಂದಿಸಿ ಮುಂದೆ ಬಂದೆವು. ಕೆಳಗಿಳಿದು ಅಂದು ರಾಂಸಿಯಲ್ಲಿ ಉಳಿದುಕೊಂಡೆವು. ಮತ್ತೆ ಉನಿಯಾನಕ್ಕೆ ಬಂದು, ಗಾಡಿಯಲ್ಲಿ ಊಖೀಮಠಕ್ಕೆ ತಲುಪಿದೆವು. ಮಾರನೆಯ ದಿವಸ ಚೋಪ್ತಾಗೆ ಗಾಡಿಯಲ್ಲಿ ಹೋದೆವು. ಇಲ್ಲೆಲ್ಲ ಒಂದು ಟೆಂಪೋ ಟ್ರ್ಯಾಕ್ಸ್‌ನಲ್ಲಿ ೨೦ಕ್ಕಿಂತಲೂ ಹೆಚ್ಚಿನ ಜನರನ್ನು ತುಂಬುತ್ತಾರೆ. ವಾಹನಗಳ ಕೊರತೆ, ವಿಧಿಯಿಲ್ಲ, ಜೈ ಭೋಲೇನಾಥ್ ಎಂದು ಮುಂದೆ ಸಾಗಿದೆವು.

### ತುಂಗನಾಥ

ನಂದಿಯ ಕಾಲುಗಳು ಇಲ್ಲಿ ಆವಿರ್ಭಾವಗೊಂಡಿವೆ ಎಂದು ಪುರಾಣಗಳು ತಿಳಿಸುತ್ತವೆ. ಭಾರತದ ತೀರ್ಥಕ್ಷೇತ್ರಗಳಲ್ಲಿ ಇದು ಅತ್ಯಂತ ಎತ್ತರವಾದ ಪ್ರದೇಶ. ಆದರೆ ಚೋಪ್ತಾದಿಂದ ಹೆಚ್ಚು ನಡೆಯಬೇಕಿಲ್ಲ. ಇಲ್ಲಿ ೪-೬ ಕಿಲೋಮೀಟರ್ ನಡೆಯಬೇಕು. ಮಧ್ಯಮಹೇಶ್ವರ್‌ಗೆ ನಡೆದ ಮೇಲೆ ಅಷ್ಟೇನೂ ಅಲ್ಲ ಎಂದೇ ಅನ್ನಿಸುತ್ತದೆ. ತುಂಗನಾಥದಲ್ಲಿ ನಾವು ಉಳಿದುಕೊಂಡೆವು. ಅಲ್ಲಿ ಅರ್ಚಕರು ನಮಗೇ ಪೂಜೆ ಮಾಡಲು ಅನುವು ಮಾಡಿಕೊಟ್ಟರು. ಅದೊಂದು ಆನಂದದ ಅನುಭವ. ಮುಂಜಾನೆಯ ೪ ಗಂಟೆಯ ನಸುಗತ್ತಲಿನಲ್ಲಿ ಚಂದ್ರಶಿಲಾ ಬೆಟ್ಟವನ್ನು ಹತ್ತಿ ಸೂರ್ಯೋದಯವನ್ನು ಆನಂದಿಸಿದೆವು. ಎಂತಹ ಗಾಳಿ! ಮನುಷ್ಯರನ್ನೇ ಅದು ಎತ್ತಿಕೊಂಡು ಹೋಗಿಬಿಡುವಷ್ಟು ಗಾಳಿಯ ರಭಸ ಅಲ್ಲಿ. ಪುನಃ ಭಗವಂತನ ದರ್ಶನವನ್ನು ಪಡೆದು ಚೋಪ್ತಾಗೆ ಬಂದು, ಮುಂದೆ ಸಗರಕ್ಕೆ ಗಾಡಿಯಲ್ಲಿ ಬಂದೆವು. ಸ್ಥಳೀಯರ ಪ್ರಕಾರ ಸಗರ ಮಹಾರಾಜನು ನೆಲೆಸಿದ್ದ ಜಾಗವದು. ಅಲ್ಲಿಯೂ ಕೆಲವು ದೇವಸ್ಥಾನಗಳು ಇವೆ. ಆಶ್ರಮವೊಂದಿದೆ. ಅಲ್ಲಿಯ ಬಾಬಾಜಿಯ ಜೊತೆ ಮಾತನಾಡಿ ಸ್ಥಳೀಯ ಪುರಾಣವನ್ನು ತಿಳಿದೆವು. ಅವರ ಪ್ರೀತಿಯ ಆತಿಥ್ಯ ಹೃದಯಸ್ಪರ್ಶಿಯಾಗಿತ್ತು.

### ರುದ್ರನಾಥ

ಸಾಗರ (ಸಗರ)ದಲ್ಲಿ ನಮ್ಮ ಲಗೇಜನ್ನು ಇರಿಸಿ, ಕಡಿಮೆ ಲಗೇಜಿನ ಜೊತೆಗೆ, ಸ್ಥಳೀಯನೊಬ್ಬನನ್ನು ಮಾರ್ಗದರ್ಶಕನಾಗಿ ಕರೆದುಕೊಂಡು ಪ್ರಯಾಣ ಪ್ರಾರಂಭಿಸಿದೆವು.

ಪ್ರಯಾಣ ರೌದ್ರವೇ ಸರಿ. ರುದ್ರನಾಥಕ್ಕೆ ಎರಡು ದಾರಿಗಳಿವೆ. ಒಂದು ದಾರಿಯ ಮಧ್ಯದಲ್ಲಿ ಕಾಡು, ಬೆಟ್ಟಗಳು; ಯಾವುದೇ ಹಳ್ಳಿಗಳೂ ಇಲ್ಲ, ದುರ್ಗಮವಾದ ರಸ್ತೆ. ಆದರೆ ಕಡಿಮೆ ದೂರ. ಇನ್ನೊಂದು ಮಾರ್ಗ ಹೆಚ್ಚು ದೂರ, ಆದರೆ ಬೆಟ್ಟದ ಪ್ರದೇಶ ಕಡಿಮೆ ಎಂದು ನಾವು ಮೊದಲೇ ತಿಳಿದಿದ್ದೆವು. ಎಲ್ಲ ಸಾಧುಗಳು ಎರಡೂ ದಾರಿಗಳನ್ನು ನೋಡೋಣ ಎಂದು ತೀರ್ಮಾನಿಸಿ, ಮೊದಲು ಈ ದುರ್ಗಮವಾದ ದಾರಿಯನ್ನೇ ಆರಿಸಿಕೊಂಡು ಪ್ರಯಾಣ ಬೆಳೆಸಿದೆವು.

ದಾರಿಯ ಮಧ್ಯದಲ್ಲಿ ಡೇರೆಯೊಂದು ದೊರಕಿತು. ಮಾರ್ಗದರ್ಶಕನು ಇಲ್ಲೇ ಉಳಿಯುವುದು ಉತ್ತಮ. ಇದು ಬಿಟ್ಟರೆ ನಮಗೆ ಬೇರೆ ಜಾಗವಿಲ್ಲ ಎಂದನು. ಆ ಬಿಡಾರದಲ್ಲಿ ನಮ್ಮ ವಾಸ್ತವ್ಯ. ಅವನು ಖಿಚುಡಿಯನ್ನು ತಯಾರಿಸಿದನು. ಆ ರಾತ್ರಿ ಚಳಿಗೆ ಹಾಗೂ ನಡೆದು ದಣಿದಿದ್ದ ದೇಹಕ್ಕೆ ಅದು ರಸದೌತಣವೇ ಸರಿ. ಮುಂಜಾನೆ ಚಹಾ, ನೂಡಲ್ಸ್ ಸೇವಿಸಿ ಪ್ರಯಾಣವನ್ನು ಬೆಳೆಸಿದೆವು. ಸುಮಾರು ೧೦-೧೧ ಘಂಟೆಗೆ ರುದ್ರನಾಥನನ್ನು ತಲುಪಿದೆವು. ಪಂಚಪಾಂಡವರು ಆ ದೇವಾಲಯವನ್ನು ನಿರ್ಮಿಸಿದ್ದಾರೆ ಎಂದು ಸ್ಥಳೀಯರ ನಂಬಿಕೆ. ರುದ್ರನಾಥದಲ್ಲಿ ನಂದಿಯ ಅಥವಾ ಭಗವಂತನ ಮುಖವು ಆವಿರ್ಭಾವವಾಯಿತು ಎಂದು ಪುರಾಣಗಳು ತಿಳಿಸುತ್ತವೆ. ಅಲ್ಲಿನ ಅರ್ಚಕರು ಪೂಜೆ ಮಾಡಿ ಪ್ರಸಾದವನ್ನು ನೀಡಿದರು. ಅಂತು ಅಲ್ಲೇ ಉಳಿಯಬೇಕೆಂದು ನನಗೆ ಆಸೆಯಿತ್ತು. ಅಲ್ಲಿನ ಕೊರೆಯುವ ಚಳಿ, ಅನಾನುಕೂಲಕರ ವಾತಾವರಣದಿಂದ ಇತರರು ಉಳಿಯಲು ಒಪ್ಪಲಿಲ್ಲ. ಇನ್ನೊಂದು ಮಾರ್ಗದ ಮೂಲಕ ನಡೆದೆವು. ಬಹಳ ಇಳಿಜಾರು ಪ್ರದೇಶ. ಆಳೆತ್ತರಕ್ಕೆ ಹುಲ್ಲು ಬೆಳೆದು ನಿಂತಿವೆ. ಸ್ವಲ್ಪ ಜಾರಿದರೂ ಉರುಳು ಸೇವೆ ಮಾಡಿಕೊಂಡು ಭಗವಂತನಿಗೆ ಪ್ರಾಣವನ್ನು ನಿವೇದಿಸುವುದಂತು ದಿಟ.

ಇಳಿಜಾರಿನ ಮಣ್ಣಿನ ಪ್ರದೇಶವನ್ನು ಮುಗಿಸಿ, ಅರಣ್ಯವನ್ನು ಪ್ರವೇಶ ಮಾಡಿದೆವು. ಜೋರು ಮಳೆ ಪ್ರಾರಂಭವಾಯಿತು. ಯಾವ ಮರದ ಕೆಳಗೆ ನಿಂತರೂ ಹೆಚ್ಚು ಪ್ರಯೋಜನವಿಲ್ಲ ಎಂದು ತಿಳಿದು, ಮಳೆಯಲ್ಲೇ ನೆನೆಯುತ್ತಾ ಮುಂದೆ ಸಾಗಿದೆವು. ಅರ್ಧ ದಾರಿಯಲ್ಲಿ ಮಳೆ ನಿಂತಿತು. ದಾರಿಯ ಮಧ್ಯದಲ್ಲಿ ಗುಡಿಸಲೊಂದು ಕಾಣಿಸಿತು. ಅವರು ಚಹಾ ಮಾರುತ್ತಿದ್ದರು. ಆ ತಣ್ಣನೇ ಪ್ರದೇಶ, ಮಳೆಯಿಂದ ತೊಯ್ದುಹೋಗಿದ್ದ ನಮಗೆ ಚಹಾ ಅಮೃತವೇ ಸರಿಯೆನಿಸಿತು. ಮುಂದೆ ನಡೆಯುತ್ತಾ ಶರೀರದಿಂದ ಬಂದ ಬಿಸಿಯಿಂದ ಬಟ್ಟೆಗಳು ಒಣಗುತ್ತಾ ಬಂದಿತು.

ಸಾಯಂಕಾಲದ ಸಮಯಕ್ಕೆ ಕೆಳಕ್ಕೆ ಇಳಿದು ಬಂದೆವು. ಅನಸೂಯ ದೇವಿಯ ದರ್ಶನ, ಇತರೆ ಕೆಲವು ದೇವಸ್ಥಾನಗಳ ದರ್ಶನವನ್ನು ಮಾಡಿಕೊಂಡು ಬಂದೆವು. ಸಗರದಲ್ಲಿ ಬಟ್ಟೆ ಬದಲು ಮಾಡಿಕೊಂಡು ಚಹಾ ಸೇವಿಸಿ, ಊಟ ಮಾಡಿ ವಿಶ್ರಾಂತಿ ಪಡೆದೆವು.

### ಕಲ್ಪೇಶ್ವರ

ಮಾರನೆಯ ದಿವಸ ಸಗರದಿಂದ ವಾಹನಗಳನ್ನು ಬದಲು ಮಾಡಿಕೊಂಡು, ಚಮೋಲಿ, ಹೇಲಂಗ್, ಉರ್ಗಾಂ ಅನ್ನು ತಲುಪಿದೆವು. ಅಲ್ಲಿಂದ ಕಲ್ಪೇಶ್ವರಕ್ಕೆ ನಡೆದುಕೊಂಡು ಹೋದೆವು. ಇಲ್ಲಿ ಭಗವಂತನ ಜಟೆಯು ಆವಿರ್ಭಾವವಾಗಿದೆ ಎಂದು ಹೇಳುತ್ತಾರೆ. ಪಂಚ ಕೇದಾರಗಳಲ್ಲಿ ಇದು ಕೊನೆಯ ಕ್ಷೇತ್ರ. ೮-೯ಕಿಮಿ ನಡೆದೆವು. ಇಲ್ಲಿ ಕೆಲವು ಗುಹೆ, ಸಣ್ಣ ಕೊಠಡಿಗಳೂ ಇವೆ. ಅನೇಕ ಸಾಧುಗಳು ಇಲ್ಲಿ ನೆಲೆಸಿದ್ದಾರೆ. ಕಲ್ಪೇಶ್ವರನ ದರ್ಶನ ಮಾಡಿ ಅಲ್ಲಿಯೇ



ಅಂದು ನೆಲೆಸಿದೆವು. ಸೇಬಿನ ಗಿಡಗಳನ್ನು ಇಲ್ಲಿ ಬಹಳ ಹತ್ತಿರದಿಂದ ಕಂಡೆವು. ಮುಂದೆ ಬದರೀನಾಥನ ದರ್ಶನವನ್ನು ಪಡೆದೆವು.

### ಪಂಚಬದರಿ

ಸಾಮಾನ್ಯವಾಗಿ ಯಾತ್ರಿಕರು ಚಾರ್‌ಧಾಮಕ್ಕೆ ಮಾತ್ರ ಹೋಗುತ್ತಾರೆ. ಇನ್ನು ಕೆಲವೇ ಕೆಲವರು ಪಂಚಕೇದಾರಕ್ಕೆ ಹೋಗುತ್ತಾರೆ. ಸಪ್ತಬದರಿ ಅಥವಾ ಪಂಚಬದರಿಯ ಕುರಿತು ಯಾರನ್ನಾದರೂ ಕೇಳಿದರೆ ಆ ಹೆಸರಿನ ತೀರ್ಥಕ್ಷೇತ್ರಗಳೂ ಇವೆಯೇ ಎಂದು ಆಶ್ಚರ್ಯ ಮತ್ತು ಪ್ರಶ್ನೆ ಅಥವಾ ಸಂದೇಹವನ್ನು ವ್ಯಕ್ತಪಡಿಸುತ್ತಾರೆ. ಭಗವಂತನ ಕೃಪೆಯಿಂದ ನಾವು ಪಂಚಕೇದಾರದ ಜೊತೆ ಪಂಚಬದರಿ ಯಾತ್ರೆಯನ್ನೂ ಕೈಗೊಂಡೆವು. ವಾಸ್ತವವಾಗಿ ಏಳು ಬದರಿಕ್ಷೇತ್ರಗಳು, ಸಪ್ತಬದರಿಗಳು ಇವೆ. ಆದರೆ ನಾವು ಐದು ಬದರಿಗಳಿಗೆ ಮಾತ್ರ ಹೋಗಿರುವುದರಿಂದ, ಪಂಚಬದರಿಯ ಕುರಿತು ಮಾತ್ರ ನಾನು ಬರೆಯುತ್ತಿದ್ದೇನೆ. ಪಂಚಬದರಿಗಳು - ಬದರಿನಾಥ, ಯೋಗಧಾನ ಬದರಿ, ಭವಿಷ್ಯ ಬದರಿ, ವೃಧ ಬದರಿ, ಅರ್ಧ ಬದರಿ.

### ವೃಧ ಬದರಿ

ಕೇದಾರದ ನಾಲ್ಕು ಕ್ಷೇತ್ರಗಳನ್ನು ದರ್ಶನ ಮಾಡಿಕೊಂಡು, ಐದನೇ ಕೇದಾರ ಅಂದರೆ ಕಲ್ಪೇಶ್ವರಕ್ಕೆ ಹೋಗುವ ದಾರಿಯಲ್ಲಿ ನಾವು ವೃಧ ಬದರಿಯ ದರ್ಶನವನ್ನು ಪಡೆದೆವು. ಜೋಶೀಮಠದಿಂದ ಸುಮಾರು ದೂರದಲ್ಲಿ ಅನಿಮಠ ಎಂಬ ಹಳ್ಳಿಯಲ್ಲಿ ಈ ದೇವಸ್ಥಾನ ಇದೆ. ಇದು ಸಣ್ಣ ಮಂದಿರ. ಪುರಾಣಗಳ ಪ್ರಕಾರ ನಾರದ ಮಹರ್ಷಿಯು ಈ ಕ್ಷೇತ್ರದಲ್ಲಿ ತಪಸ್ಸನ್ನು ಕೈಗೊಂಡನಂತೆ. ಶ್ರೀಮನ್ನಾರಾಯಣನು ವೃದ್ಧನ ರೂಪದಲ್ಲಿ ದರ್ಶನವಿತ್ತನಂತೆ. ಆದ್ದರಿಂದ ಇಲ್ಲಿ ಭಗವಂತನ ವಿಗ್ರಹವು ವೃದ್ಧನ ರೂಪದಲ್ಲಿದೆ. ಈ ವಿಗ್ರಹವನ್ನು ವಿಶ್ವಕರ್ಮನೇ ಸ್ವತಃ ರಚಿಸಿ, ಪೂಜಿಸಿದ್ದಾನೆ. ವರ್ಷವಿಡೀ ಯಾತ್ರಿಕರು ಇಲ್ಲಿಗೆ ಹೋಗಬಹುದು. ಆಡುಮಾತಿನಲ್ಲಿ ವೃದ್ಧ ಎಂಬುದು ವೃಧ ಆಗಿಹೋಗಿದೆ.

### ಭವಿಷ್ಯಬದರಿ

ಜೋಶಿಮಠದಿಂದ ಸುಮಾರು ೧೭ ಕಿಲೋಮೀಟರ್ ದೂರದಲ್ಲಿ, ತಪೋವನದ (ಗಂಗೋತ್ರಿಯ ತಪೋವನ ಅಲ್ಲ) ಮುಂದೆ, ಒಂದು ಹಳ್ಳಿಯ ಸಮೀಪ ಬೆಟ್ಟದ ಮೇಲೆ ಈ ದೇವಸ್ಥಾನವಿದೆ. ಇಲ್ಲಿಗೆ ನಡೆದುಕೊಂಡೇ ಹೋಗಬೇಕು. ಹತ್ತಲು ಸಾಧ್ಯವಾಗುವವರು ಮಾತ್ರ ಇಲ್ಲಿಗೆ ಹೋಗಬಹುದು. ಹೆಸರೇ ಸೂಚಿಸುವಂತೆ, ಸ್ಥಳೀಯ ನಂಬಿಕೆಯ ಪ್ರಕಾರ ಈ ಕ್ಷೇತ್ರವು ಭವಿಷ್ಯದಲ್ಲಿ ಮುಖ್ಯ ಬದರಿಕ್ಷೇತ್ರ ಆಗುತ್ತದೆ ಎಂದು. ಸಾಲಧರ್ ಎಂಬ ಸ್ಥಳಕ್ಕೆ ಬಸ್‌ನಲ್ಲಿ ಹೋಗಿ, ಅಲ್ಲಿಂದ ಸುಮಾರು ೬ ಕಿಲೋಮೀಟರ್ ಬೆಟ್ಟವನ್ನು ಹತ್ತಬೇಕು. ಇಲ್ಲಿಂದ ಕೈಲಾಸ ಪರ್ವತಕ್ಕೆ ಹಳೆಯ ದಾರಿಯಿದೆ. ಕೆಲವು ಸಣ್ಣ ಹಳ್ಳಿಗಳ ಮೂಲಕ ಈ ಬೆಟ್ಟದ ದಾರಿ ಹಾದುಹೋಗುತ್ತದೆ. ಇಲ್ಲಿ ನರಸಿಂಹನ ವಿಗ್ರಹವು ಸುಂದರ ಹಾಗೂ ಅಮೋಘವಾಗಿದೆ. ದೇವಸ್ಥಾನದ ಬಳಿ ಆಶ್ರಮವೊಂದಿದೆ. ಕೆಲವು ಬಾಬಾಜಿಗಳು ಅಥವಾ ಅಘೋರಿಗಳು ಇಲ್ಲಿ ವಾಸವಿರುತ್ತಾರೆ. ದ್ರೋಣಗಿರಿ ಪರ್ವತ ಹಾಗೂ ಇತರ ಪರ್ವತ ಶ್ರೇಣಿಗಳನ್ನು ಇಲ್ಲಿಂದ ಕಾಣಬಹುದು. ಆದರೆ ಜೋಶೀಮಠದಿಂದ ಸಾಲಧಾರಕ್ಕೆ ಹೋಗಲು, ಮತ್ತೆ ಜೋಶಿಮಠಕ್ಕೆ ವಾಪಸ್ಸಾಗಲು ಬಸ್ಸಿಗಾಗಿ ನಾವು ಬಹಳ ಹೊತ್ತು ಕಾಯಬೇಕಾಯಿತು. ಸುಮಾರು ಒಂದು ದಿವಸವೇ ಇದಕ್ಕೆ ಮೀಸಲಿಡಬೇಕಾಯಿತು.

### ಅರ್ಧಬದರಿ

ಭವಿಷ್ಯಬದರಿಗೆ ಹೋಗುವ ದಾರಿಯಲ್ಲೇ ಅರ್ಧಬದರಿಯನ್ನು ನಾವು ನೋಡಿದೆವು. ಇದು ಅತ್ಯಂತ ಸಣ್ಣ ಮಂದಿರ ಎಂದೇ ಹೇಳಬಹುದು. ಆದರೆ ಭಗವಂತನ ವಿಗ್ರಹ ಮತ್ತು ಹೂವಿನ ಅಲಂಕಾರ ಬಹಳ ಸುಂದರವಾಗಿತ್ತು. ಎಷ್ಟು ನೋಡಿದರೂ ಹೃದಯಕ್ಕೆ ಇನ್ನೂ ನೋಡಬೇಕು ಎಂದೆನಿಸುತ್ತಿತ್ತು.



## ಯೋಗಧ್ಯಾನ ಬದರಿ

ಮುಖ್ಯ ಬದರಿ ಕ್ಷೇತ್ರಕ್ಕೆ ಹೋಗುವಾಗಲೂ, ಬರುವಾಗಲೂ ಈ ಕ್ಷೇತ್ರಕ್ಕೆ ಭೇಟಿ ನೀಡಿ ಭಗವಂತನ ದರ್ಶನ ಮಾಡಿದೆವು. ಇದು ಪಾಂಡುಕೇಶ್ವರ ಎಂಬ ಸ್ಥಳದಲ್ಲಿದೆ. ಇಲ್ಲಿ ಭಗವಂತನು ಧ್ಯಾನಸ್ಥನಾಗಿದ್ದಾನೆ. ಪುರಾಣಗಳ ಪ್ರಕಾರ, ಪಾಂಡವರು ತಮ್ಮ ಪಾಪಗಳನ್ನು ಕಳೆದುಕೊಳ್ಳಲು ಇಲ್ಲಿಗೆ ಬಂದು ಭಗವಂತನನ್ನು ಅರ್ಚಿಸಿದ್ದರಂತೆ.



ಪಾಂಡು ಮಹಾರಾಜ ಕುಂತಿಯನ್ನು ಇಲ್ಲಿಯೇ ವಿವಾಹವಾದನು ಎಂದು ಸ್ಥಳೀಯರು ನಂಬುತ್ತಾರೆ. ಅಲ್ಲದೆ ಇಲ್ಲಿಯೇ ಪಾಂಡು ಮಹಾರಾಜನು ತಪಸ್ಸಿಗೆಂದು ಬಂದು ಶಾಪಗ್ರಸ್ತನಾಗಿ ಸತ್ತುಹೋದನು. ಇದು ಪಾಂಡವರು ಜನಿಸಿದ ಸ್ಥಳವೂ ಹೌದು ಎಂದು ಪುರಾಣಗಳು ತಿಳಿಸುತ್ತವೆ.

ಭಗವಂತನು ಶಂಖ, ಚಕ್ರಗಳನ್ನು ಎರಡೂ ಕೈಗಳಲ್ಲಿ ಹಿಡಿದು, ಇನ್ನೆರಡು ಕೈಗಳನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡು ಧ್ಯಾನಸ್ಥನಾಗಿದ್ದಾನೆ. ಚಿಕ್ಕಮೂರ್ತಿಯಾದರೂ ನೋಡಲು ಬಹಳ ಸುಂದರವಾಗಿದೆ.

## ಬದರಿನಾಥ

ಭಗವಂತನು ನರ ಮತ್ತು ನಾರಾಯಣನ ರೂಪದಲ್ಲಿ ವರ್ಷಗಳ ಕಾಲ ಇಲ್ಲಿ ತಪಸ್ಸು ಮಾಡಿದ್ದಾನೆ ಎಂದು ಪುರಾಣಗಳು ತಿಳಿಸುತ್ತವೆ. ಭಗವಂತನು ತಪೋನಿರತನಾಗಿದ್ದಾಗ, ಅವನಿಗೆ ನೆರಳು ನೀಡಲೆಂದು ಲಕ್ಷ್ಮೀದೇವಿಯು ಬದರಿವೃಕ್ಷದ (ಎಲಚಿಹಣ್ಣು) ರೂಪದಲ್ಲಿ ನಿಂತಿದ್ದಳಂತೆ. ಆದ್ದರಿಂದ ಈ ಕ್ಷೇತ್ರವನ್ನು ಬದರಿಕ್ಷೇತ್ರವೆಂದು ಕರೆಯುತ್ತಾರೆ.

ಸಮೀಪದಲ್ಲಿ ಮಾನಾ ಎಂಬ ಹಳ್ಳಿಯಿದೆ. ಇದು ಭಾರತದ ಕೊನೆಯ ಹಳ್ಳಿ. ಸರಸ್ವತಿ ನದಿ ಹಾಗೂ ವ್ಯಾಸ ಗುಹೆಯಿದೆ. ವ್ಯಾಸ ಮಹರ್ಷಿಗಳು ಮಹಾಭಾರತವನ್ನು ಗಣೇಶನ ಸಹಾಯದಿಂದ ಇಲ್ಲೇ ರಚಿಸಿದರು ಎಂಬ ಪ್ರತೀತಿ ಇದೆ.

ಪಂಚ ಕೇದಾರ ಹಾಗೂ ಪಂಚ ಬದರಿ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿ, ಆನಂದದಿಂದ ಧನ್ಯತಾಭಾವದಿಂದ ಹರಿದ್ವಾರಕ್ಕೆ ನಾವು ಹಿಂತಿರುಗಿದೆವು. ಸ್ವಲ್ಪ ವಿಶ್ರಾಂತಿಯನ್ನು ಪಡೆದು, ೨ ದಿವಸಗಳಲ್ಲಿ ನಮ್ಮ ನಮ್ಮ ಆಶ್ರಮಕ್ಕೆ ಮರಳಿ ಬಂದೆವು. ಅದೊಂದು ಅವಿಸ್ಮರಣೀಯ ಅಲೌಕಿಕ ಅನುಭವ.

